ಇರಿಸಿತು. ನಂತರ ಸಾವಕಾಶವಾಗಿ ಆತನ ಹಾಸಿಗೆಯ ಸುತ್ತ ಹಾರುತ್ತ, ತನ್ನ ರೆಕ್ಕೆಗಳಿಂದ ಆ ಹುಡುಗನ ಹಣೆಗೆ ಗಾಳಿ ಬೀಸಿತು.

ಅಲ್ಲಿಂದ ಮರಳಿ ಸ್ವಾಲೋ ಸುಖಿ ರಾಜಕುಮಾರನ ಬಳಿಗೆ ಬಂತು. ಅಲ್ಲಿ ತಾನೇನು ಮಾಡಿದೆ ಎಂಬುದನ್ನು ಆತನಿಗೆ ವಿವರಿಸಿತು.

'ಎಂಥ ಆಶ್ಚರ್ಯವಿದು! ಹೊರಗೆ ಇಷ್ಟೊಂದು ಚಳಿ ಇದ್ದರೂ ನನ್ನೊಳಗೆ ಬೆಚ್ಚಗೆ ಬಿಸಿ ತುಂಬಿಕೊಂಡಂತೆ ಭಾಸವಾಗುತ್ತಿದೆ.'

'ಅದಕ್ಕೆ ಕಾರಣವೆಂದರೆ, ನೀನು ಒಳ್ಳೆಯ ಕೆಲಸ ಮಾಡಿ ಬಂದಿರುವೆ' ಎಂದು ರಾಜಕುಮಾರ ಹೇಳಿದ. ಆ ಪುಟ್ಟ ಸ್ವಾಲೋ ಆ ಕುರಿತು ವಿಚಾರ ಮಗ್ನವಾಯಿತು. ನಂತರ ಅದಕ್ಕೆ ನಿದ್ರೆ ಆವರಿಸಿತು. ವಿಚಾರದಲ್ಲಿ ಮುಳುಗಿದಾಗಲೆಲ್ಲ ಆ ಹಕ್ಕಿಗೆ ನಿದ್ರೆಯ ಮಂಪರು ಆವರಿಸುತ್ತಿತ್ತು.

ಬೆಳಗಾದೊಡನೆ ನದಿಗೆ ಹಾರಿ ಹೋಗಿ ಅದು ಜಳಕ ಮಾಡಿತು. ಸೇತುವೆಯ ಮೇಲೆ ಹಾದು ಹೊರಟಿದ್ದ ಪಕ್ಷಿಶಾಸ್ತ್ರ ಪ್ರಾಧ್ಯಾಪಕನೊಬ್ಬ ಅದನ್ನು ಕಂಡು, 'ಚಳಿಗಾಲದಲ್ಲಿ ಸ್ವಾಲೋ ಹಕ್ಕಿಯ ದರ್ಶನವೆ! ಎಂಥ ಅದ್ಭುತ ಸಂಗತಿಯಿದು!' ಎಂದು ಉದ್ಗರಿಸಿದ. ನಂತರ ಅವನು ಸ್ಥಳೀಯ ಪತ್ರಿಕೆಗೆ ಆ ಕುರಿತು ಒಂದು ಸುದೀರ್ಘ ಲೇಖನ ಬರೆದ. ಎಲ್ಲ ಓದುಗರು ಆ ಕುರಿತು ಚರ್ಚಿಸಿದರು. ಆದರೆ ಆ ಲೇಖನ ಶಬ್ದಗಳ ಗೊಂಡಾರಣ್ಯವಾಗಿದ್ದರಿಂದ ಅದು ಯಾರಿಗೂ ಅರ್ಥವಾಗಲಿಲ್ಲ.

'ಇಂದು ರಾತ್ರಿ ನಾನು ಇಜಿಪ್ಟ್‌ಗೆ ಹೊರಡುವೆ' ಸ್ವಾಲೋ ಹೇಳಿತು. ತನ್ನ ಈ ನಿರ್ಧಾರದಿಂದ ಅದು ತುಂಬ ಉತ್ತೇಜಿತವಾಗಿತ್ತು. ಅದು ನಗರದ ಎಲ್ಲ ಸಾರ್ವಜನಿಕ ಸ್ಮಾರಕಗಳಿಗೆ ಭೆಟ್ಟಿ ನೀಡಿತ್ತು. ಚರ್ಚ್ ಗೋಪುರದ ಮೇಲೆ ಬಹಳ ಹೊತ್ತು ಕುಳಿತುಕೊಂಡಿತ್ತು. ಅದು ಹೋದಲ್ಲೆಲ್ಲ ಅಲ್ಲಿದ್ದ ಗುಬ್ಬಿಗಳು ಚಿಲಿಪಿಲಿಗುಡುತ್ತ 'ಎಂಥ ವಿಲಕ್ಷಣ ವಲಸೆ ಹಕ್ಕಿ ಇದು!' ಎಂದು ತಮ್ಮ ತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದವು. ಅದನ್ನು ಕೇಳಿಸಿಕೊಂಡು ಅದು ಒಳಗೊಳಗೇ ಖುಷಿ ಪಟ್ಟುಕೊಂಡಿತು.

ಚಂದ್ರೋದಯವಾದ ಮೇಲೆ ಅದು ರಾಜಕುಮಾರನ ಬಳಿಗೆ ಬಂದು ಇಜಿಪ್ಟಿನಲ್ಲಿ ಮಾಡಬೇಕಾದ ಕೆಲಸಗಳೇನಾದರೂ ಇವೆಯೇ? ಸದ್ಯ, ನಾನಲ್ಲಿಗೆ ಹೊರಟಿರುವೆ' ಎಂದು ಕೇಳಿತು.

'ಸ್ವಾಲೋ, ಸ್ವಾಲೋ, ಪುಟ್ಟ ಸ್ವಾಲೋ, ಇನ್ನೊಂದು ರಾತ್ರಿ ನೀನು ನನ್ನ ಜೊತೆ ಕಳೆಯಲಾರೆಯಾ?' ಎಂದು ರಾಜಕುಮಾರ ಕೇಳಿದ.

ಆ ಮಾತಿಗೆ ಉತ್ತರವಾಗಿ ಸ್ವಾಲೋ ಹೇಳಿತು, 'ಇಲ್ಲ, ಇಲ್ಲ ಇಜಿಪ್ಟಿನಲ್ಲಿ ನನಗಾಗಿ ನನ್ನ ಗೆಳೆಯರು ದಾರಿ ಕಾಯುತ್ತಿದ್ದಾರೆ. ಅವರು ನಾಳೆ ನೈಲ್ ನದಿಯ ಎರಡನೆಯ ಜಲಸಂಧಿ ತಲುಪಲಿದ್ದಾರೆ. ಅಲ್ಲಿ ಹಿಪ್ಪೊಪೊಟಮಸ್ ಜಲಸಸ್ಯಗಳ ಜೊಂಡಿನಲ್ಲಿ ಮಲಗಿರುತ್ತದೆ. ಹಾಗೂ ಗ್ರೆನೈಟ್ ಕಲ್ಲಿನ ಸಿಂಹಾಸನದ ಮೇಲೆ ಭಗವಾನ ಮೆಮ್ನಾನ್ ಕುಳಿತಿದ್ದಾನೆ. ಇಡೀ ರಾತ್ರಿ ಆತ ನಕ್ಷತ್ರಗಳನ್ನು ನೋಡುತ್ತಿರುತ್ತಾನೆ. ನಸುಕಿನಲ್ಲಿ ಬೆಳ್ಳಿಚುಕ್ಕೆ ಮೂಡುವುದೇ ತಡ ಆತ ಆನಂದದಿಂದ ಕೇಕೆ ಹಾಕಿ ನಂತರ ಮೌನಕ್ಕೆ ಶರಣಾಗುತ್ತಾನೆ. ಮಧ್ಯಾಹ್ನ ಹಳದಿ ಬಣ್ಣದ ಸಿಂಹಗಳು ನೀರು ಕುಡಿಯಲು ತೀರಕ್ಕೆ ಬರುತ್ತವೆ. ಅವುಗಳಿಗೆ ಹಸಿರು ಬೆರಿಲ್ ರತ್ನಗಳಂಥ ಕಣ್ಣುಗಳಿರುತ್ತವೆ. ಅವುಗಳ ಗರ್ಜನೆ ಸಮುದ್ರ ಜಲಸಂಧಿಯ ಅಬ್ಬರಕ್ಕಿಂತಲೂ ಘೋರವಾಗಿರುತ್ತದೆ.'